**ಕರ್ನಾಟಕ ಸರ್ಕಾರ**
**ವಾಣಿಜ್ಯ ತೆರಿಗೆಗಳ ಇಲಾಖೆ**

ಸಂಖ್ಯೆ.ಸಿಸಿಡಬ್ಲ್ಯೂ.ಸಿಆರ್.71/2012-13

ವಾಣಿಜ್ಯ ತೆರಿಗೆ ಆಯುಕ್ತರವರ ಕಛೇರಿ,
ವಾಣಿಜ್ಯ ತೆರಿಗೆ ಕಾರ್ಯಾಲಯ, ಗಾಂಧಿನಗರ,
ಬೆಂಗಳೂರು-560009, ದಿನಾಂಕ. 30-10-2012

ಗೆ,

ರಾಜ್ಯದ ಎಲ್ಲಾ ವಾಣಿಜ್ಯ ತೆರಿಗೆ
ಜಂಟಿ ಆಯುಕ್ತರುಗಳು(ಆಡಳಿತ)
ಮೌ.ತೆ.ವಿಭಾಗೀಯ ಕಛೇರಿಗಳು

ಮಾನ್ಯರೆ,

**ವಿಷಯ:** 1956ರ ಕೇಂದ್ರ ಮಾರಾಟ ತೆರಿಗೆ ಕಾಯ್ದೆ ಹಾಗೂ 2011ರ ಕರ್ನಾಟಕ ನಾಗರೀಕರಿಗೆ ಸೇವಾ ಖಾತರಿ ಅಧಿನಿಯಮ (ಸಕಾಲ) ದಡಿ ಅರ್ಜಿಗಳನ್ನು ತಿರಸ್ಕರಿಸುವ ವಿಧಾನದ ಬಗ್ಗೆ

**ಉಲ್ಲೇಖ:** 1) ಈ ಕಛೇರಿಯ ಸುತ್ತೋಲೆ ಸಂಖ್ಯೆ .ವಾ.ತೆ.ಇ.ಸಿಸಿಡಬ್ಲ್ಯೂ.ಸಿಆರ್.79/ 2011-12 ದಿನಾಂಕ 22/03/2012
2) ಈ ಕಛೇರಿಯ ಪತ್ರ ಸಂಖ್ಯೆ .ವಾ.ತೆ.ಇ.ಸಿಸಿಡಬ್ಲ್ಯೂ.ಸಿಆರ್.79/ 2011-12 ದಿನಾಂಕ 15/06/2012.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 1956ರ ಕೇಂದ್ರ ಮಾರಾಟ ತೆರಿಗೆ ಕಾಯ್ದೆ ಅಡಿಯಲ್ಲಿ ವಿವಿಧ ನಮೂನೆಗಳನ್ನು/ಪ್ರಮಾಣಪತ್ರಗಳನ್ನು ನೀಡುವಲ್ಲಿ ಹಾಗೂ ಈ ಸೇವೆಯನ್ನು 2011ರ ಕರ್ನಾಟಕ ನಾಗರೀಕರಿಗೆ ಸೇವಾ ಖಾತರಿ ಅಧಿನಿಯಮ (ಸಕಾಲ)ದಡಿ 10 ದಿವಸಗಳಲ್ಲಿ ವಿಲೇವಾರಿ ಮಾಡುವುದು ಅವಶ್ಯಕತೆ ಇರುತ್ತದೆ. ಈ ಸೇವೆಯನ್ನು ನೀಡುವಾಗ ಕೆಲವು ಅಧಿಕಾರಿಗಳು ಶಾಸನಬದ್ಧ ನಮೂನೆಗಳನ್ನು ತತ್ರಾಂಶದಲ್ಲಿ ತಿರಸ್ಕರಿಸುತ್ತಾರೆ. ನಂತರ ಇವುಗಳನ್ನು ಅರ್ಜಿದಾರರು ಸರಿಯಾಗಿ ಅರ್ಥಮಾಡಿಕೊಳ್ಳದೇ, ಮತ್ತೊಮ್ಮೆ ಇದೇ ರೀತಿಯ ಅರ್ಜಿಗಳನ್ನು ಸಲ್ಲಿಸಿದಾಗ ಅಧಿಕಾರಿಗಳು ಪುನಃ ತಿರಸ್ಕರಿಸುತ್ತಿದ್ದಾರೆ. ಈ ವಿಧಾನದಿಂದಾಗಿ 'ಸಕಾಲ' ದಡಿಯಲ್ಲಿ ತಿರಸ್ಕರಣೆಗಳು ಹೆಚ್ಚಾದ ಸಂಖ್ಯೆಯಲ್ಲಿ ಉದ್ಭವವಾಗುತ್ತಿವೆ.

ಈ ಕಾರಣಕ್ಕಾಗಿ ಅಧಿಕಾರಿಗಳು ಯಾವುದಾದರೂ ಶಾಸನಬದ್ಧ ನಮೂನೆಗಳ/ಪ್ರಮಾಣಪತ್ರಗಳ ಅರ್ಜಿಗಳನ್ನು ತಿರಸ್ಕರಿಸುವ ಸಂದರ್ಭ ಬಂದಲ್ಲಿ ತತ್ರಾಂಶದಲ್ಲಿ ಕಾರಣ ನೀಡಿ ತಿರಸ್ಕರಿಸಬಹುದು. ಅಲ್ಲದೇ ಸಕಾರಣ ನೀಡಿ ತಿರಸ್ಕರಿಸುವುದಾದರೇ ಈ ಬಗ್ಗೆ ಒಂದು ನಡಾವಳಿಯನ್ನು ಅಥವಾ ಹಿಂಬರಹವನ್ನು ಹೊರಡಿಸಿ ಸಂಬಂಧಪಟ್ಟ ಅರ್ಜಿದಾರನಿಗೆ ಕಡ್ಡಾಯವಾಗಿ ನೀಡತಕ್ಕದ್ದು. ಈ ಎಲ್ಲಾ ಪ್ರಕ್ರಿಯೆಯು 10 ದಿನಗಳೊಳಗಾಗಿ ಅರ್ಜಿದಾರನ ಮೇಲೆ ಜಾರಿ ಆಗತಕ್ಕದ್ದು.

ಅಂತೆಯೇ ರಾಜ್ಯದ ಮೌಲ್ಯವರ್ಧಿತ ತೆರಿಗೆ ವಿಭಾಗ(ಆಡಳಿತ)ದ ಎಲ್ಲಾ ಜಂಟಿ ಆಯುಕ್ತರುಗಳು ತಮ್ಮ ಅಧೀನ ಅಧಿಕಾರಿಗಳಿಗೆ ಈ ಬಗ್ಗೆ ಸೂಕ್ತ ಸೂಚನೆ ನೀಡತಕ್ಕದ್ದು ಹಾಗೂ ಯಾವುದೇ ಅರ್ಜಿದಾರನೂ ತನಗೆ ತಿರಸ್ಕರಣೆ ಬಗ್ಗೆ ಲಿಖಿತ ಮಾಹಿತಿ/ಹಿಂಬರಹ ಬಂದಿಲ್ಲ ಎಂದು ದೂರುಗಳನ್ನು ನೀಡಲು ಅವಕಾಶ ನೀಡಬಾರದು ಎಂದು ಈ ಮೂಲಕ ಕಟ್ಟು ನಿಟ್ಟಾಗಿ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ

(ಯೋಗೇಂದ್ರ ತ್ರಿಪಾಠಿ)
ವಾಣಿಜ್ಯ ತೆರಿಗೆಗಳ ಆಯುಕ್ತರು
ಕರ್ನಾಟಕ, ಬೆಂಗಳೂರು.

**ಪ್ರತಿಯನ್ನು ರಾಜ್ಯದ ಎಲ್ಲಾ ಮೌಲ್ಯವರ್ಧಿತ ತೆರಿಗೆ ಅಧಿಕಾರಿ, ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿಗಳ ಗಮನಕ್ಕೆ.**